ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಕೆ. ಸುಧೀಂದ್ರರಾವ್

ಪಾರ್ವತಮ್ಮ ಹಾಗೂ ಮತ್ತೊಬ್ಬರು -ವಿರುದ್ಧ-ಗೋವಿಂದಪ್ಪ ಹಾಗೂ ಇತರರು

ಆರ್.ಎಸ್.ಎ.ಸಂಖ್ಯೆ: 1316/2004, ದಿನಾಂಕ 25 ನೇ ಏಪ್ರಿಲ್, 2019

ತೀರ್ಪು

ನ್ಯಾಯಮೂರ್ತಿ ಶ್ರೀ ಎನ್.ಕೆ. ಸುಧೀಂದ್ರರಾವ್:

ಮೂಲ ದಾವೆಸಂಖ್ಯೆ: 125/2001 ರಲ್ಲಿ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ), ಕಡೂರು ಇವರು ಹೊರಡಿಸಿದದಿನಾಂಕ: 28.10.2002 ರ ತೀರ್ಪು ಹಾಗೂ ಡಿಕ್ರಿಯನ್ನು ವಿಪರ್ಯಯಗೊಳಿಸಿ, ಆರ್.ಎ.ಸಂಖ್ಯೆ:38/2002 ರಲ್ಲಿ ಮಾನ್ಯ ಹೆಚ್ಚುವರಿ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಧೀಶರು, ಚಿಕ್ಕಮಗಳೂರು ಇವರು ಹೊರಡಿಸಿದದಿನಾಂಕ: 10.11.2004 ರ ತೀರ್ಪು ಹಾಗೂ ಡಿಕ್ರಿಯನ್ನು ಪ್ರಶ್ನಿಸಿ, ವಾದಿಗಳು ಈ ನಿಯತ ಎರಡನೇ ಅಪೀಲನ್ನು ಸಲ್ಲಿಸಿದ್ದಾರೆ ಹಾಗೂ ತತ್ಪರಿಣಾಮವಾಗಿ ವಾದಿಗಳು ಸಲ್ಲಿಸಿದ ದಾವೆಯನ್ನು ವಜಾಗೊಳಿಸಲಾಗಿದೆ.

2. ಗೊಂದಲ ಹಾಗೂ ಅತಿವ್ಯಾಪನೆಯನ್ನು ತಪ್ಪಿಸುವ ಸಲುವಾಗಿ, ಪಕ್ಷಕಾರರನ್ನು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಅವರು ಹೊಂದಿದ್ದ ದರ್ಜೆಗಳಿಗನುಸಾರವಾಗಿ ಉಲ್ಲೇಖಿಸಲಾಗಿದೆ.

3. ಮೂಲತಃ ಹನುಮಣ್ಣ ಎಂಬುವವನ ಪತ್ನಿ ಹಾಗೂ ಮಗನಾದ 1 ನೇ ವಾದಿ ಪಾರ್ವತಮ್ಮ ಹಾಗೂ 2 ನೇ ವಾದಿ ಲೋಕೇಶ್ ಇವರು ಕಡೂರಿನ ಮುನ್ಸಿಫ್ ಕಡತದಲ್ಲಿ,ದಿನಾಂಕ: 15.12.1994 ಮೂಲ ದಾವೆಸಂಖ್ಯೆ: 515/1992 ರಲ್ಲಿ ಹೊರಡಿಸಿದ ಏಕಪಕ್ಷೀಯ ಡಿಗ್ರಿಯನ್ನು ವಜಾಗೊಳಿಸುವಂತೆ ಕೋರಿ ಹಾಗೂ ಮೇಲನಹಳ್ಳಿ ಗ್ರಾಮ, ಹಿರೇನಲ್ಲೂರ್ ಹೋಬಳಿ, ಕಡೂರು ತಾಲೂಕಿನ ಸರ್ವೆಸಂಖ್ಯೆ: 10 ರಲ್ಲಿರುವ 24 ಎಕರೆ 19 ಗುಂಟೆಗಳ ಪ್ರದೇಶಕ್ಕೆ ವಾದಿಗಳು ದಾವಾ ಸ್ವತ್ತಿನ ನಿರುಪಾಧಿಕ ಮಾಲೀಕರು ಎಂದು ಘೋಷಿಸುವಂತೆ ಕೋರಿ ದಾವೆಯನ್ನು ಹೂಡಿದ್ದರು.

4. ಕೇಮಿನ ಸಾರಾಂಶವೇನೆಂದರೆ, 1 ನೇ ಸಂಖ್ಯೆಯ ವಾದಿಯಾದ ಶ್ರೀಮತಿ ಪಾರ್ವತಮ್ಮ ಹನುಮಣ್ಣನ ಪತ್ನಿಯಾಗಿದ್ದಾಳೆ ಹಾಗೂ 2 ನೇ ಸಂಖ್ಯೆಯ ವಾದಿ ಲೋಕೇಶ್ ಎಚ್, ಇವರು ಹನುಮಣ್ಣನ ಮಗನಾಗಿದ್ದಾನೆ.1 ನೇ ಸಂಖ್ಯೆಯ 9 ಪ್ರತಿವಾದಿಯಾದ ಗೋವಿಂದಪ್ಪನು, ಹನುಮಣ್ಣನ ತಮ್ಮ ಹಾಗೂ 2 ನೇ ಸಂಖ್ಯೆಯ ಪ್ರತಿವಾದಿಯಾದ ಕರಿಯಪ್ಪನು 1 ನೇ ಪ್ರತಿವಾದಿಯಾದ ಗೋವಿಂದಪ್ಪನ ಮಗನಾಗಿದ್ದಾನೆ.3 ನೇ ಸಂಖ್ಯೆಯ ಪ್ರತಿವಾದಿಯಾದ ಎಂ.ಬಿ. ಕಲ್ಲೇಶಪ್ಪನು, 1 ನೇ ಪ್ರತಿವಾದಿ ಗೋವಿಂದಪ್ಪ ಹಾಗೂ ಕರಿಯಪ್ಪನಿಂದ ದಾವಾ ಸ್ವತ್ತನ್ನು ಖರೀದಿಸಿರುವನೆಂದು ಹೇಳಲಾಗಿದೆ.

5. 1 ನೇ ಸಂಖ್ಯೆಯ ಹಾಗೂ 2 ನೇ ಸಂಖ್ಯೆಯ ಪ್ರತಿವಾದಿಗಳ ವಾದ ಏನೆಂದರೆ, ವಾದಿಗಳು ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು, ಅಧಿಕಾರ ಅಥವಾ ಸ್ವಾಧೀನತೆಯನ್ನು ಹೊಂದಿರುವುದಿಲ್ಲ ಹಾಗೂ ಅವರು ಹನುಮಣ್ಣನ ಅಥವಾ ಪ್ರತಿವಾದಿಗಳ ಕುಟುಂಬ ಸದಸ್ಯರಾಗಲಿ ಆಗಿರಲಿಲ್ಲ ಎಂಬುದಾಗಿದೆ.1 ನೇ ವಾದಿಯು ಹನುಮಣ್ಣನ ಪತ್ನಿಯಾಗಿದ್ದಾಳೆ ಹಾಗೂ 2 ನೇ ವಾದಿಯು ಅವಳ ಮಗನಾಗಿದ್ದಾನೆ ಎಂದು ಹೇಳಿ ವಾದಿಗಳು ಪ್ರಸ್ತುತ ದಾವೆಯನ್ನು ಹೂಡಿರುತ್ತಾರೆ.1 ಹಾಗೂ 2 ನೇ ಸಂಖ್ಯೆಯ ಪ್ರತಿವಾದಿಗಳು, ಸದರಿ ಹನುಮಣ್ಣನ ಜೊತೆಗೆ 1 ಹಾಗೂ 2 ನೇ ಸಂಖ್ಯೆಯ ವಾದಿಗಳು ವೈವಾಹಿಕ ಹಾಗೂ ಪಿತೃತ್ವ ಸಂಬಂಧವನ್ನು ಹೊಂದಿದ್ದರೆಂಬುದನ್ನು ದೃಢವಾಗಿ ನಿರಾಕರಿಸುತ್ತಾರೆ.

6. ಸದರಿ ಹನುಮಣ್ಣನು ತೀರಿಕೊಂಡಿದ್ದಾನೆ.ವಾದಿಗಳು ಹಾಗೂ ಪ್ರತಿವಾದಿಗಳೆಲ್ಲರೂ ದಾವೆಯ ಸ್ವತ್ತನ್ನು ಹನುಮಣ್ಣ ಬದುಕಿದ್ದಾಗ ಅವನಿಗೆ ನೀಡಲಾಗಿದ್ದರಿಂದ ಆ ಸ್ವತ್ತಿಗೆ ಅವನು ಮಾಲೀಕ ಎಂಬುದರ ಬಗ್ಗೆ ಯಾವುದೇ ವಿವಾದವಿಲ್ಲ.1 ನೇ ಸಂಖ್ಯೆಯ ಪ್ರತಿವಾದಿಯು ಹನುಮಣ್ಣನ ತಮ್ಮನಾಗಿದ್ದು, ದಾವಾ ಸ್ವತ್ತಿನ ಮೇಲಿರುವ ಹನುಮಣ್ಣನ ಒಡೆತನವನ್ನು ಒಪ್ಪಿಕೊಂಡಿದ್ದಾರೆ.ವಾದಿಗಳ ಕ್ಲೇಮು ಏನೆಂದರೆ, 1 ನೇ ವಾದಿಯು

ಹನುಮಣ್ಣನ ವಿಧವಾ ಪತ್ನಿಯಾಗಿದ್ದು, 2 ನೇ ವಾದಿಯು ಅವನ ಮಗನಾಗಿರುವುದರಿಂದ ಅವರು ಸದರಿ ಸ್ವತ್ತಿನ ವಾರಸುದಾರರಾಗಿದ್ದಾನೆ ಎಂಬುದಾಗಿದೆ.ವಿವಾದದ ಸಾರಾಂಶವೇನೆಂದರೆ, ಇದು ಪತ್ನಿ ಹಾಗೂ ಮಗನೆಂದು ಕ್ಲೇಮು ಮಾಡಿಕೊಂಡಿರುವ 1 ನೇ ಹಾಗೂ 2 ನೇ ವಾದಿಗಳ ಹಾಗೂ ಹನುಮಣ್ಣನ ತಮ್ಮನೆಂದು ಕ್ಲೇಮು ಮಾಡಿಕೊಂಡಿರುವ 1 ನೇ ಪ್ರತಿವಾದಿಯ ಪ್ರತಿಸ್ಪರ್ಧಿ ಕ್ಲೇಮಾಗಿದೆ.2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಮಗನಾಗಿದ್ದಾನೆ.

7. 3ನೇ ಸಂಖ್ಯೆಯ ಪ್ರತಿವಾದಿಗೆ ಸಂಬಂಧಪಟ್ಟ ಮಟ್ಟಿಗೆ ಹೇಳುವುದಾದರೆ, ಅವನು 1 ಹಾಗೂ 2 ನೇ ಪ್ರತಿವಾದಿಗಳಿಂದ ದಾವಾ ಸ್ವತ್ತನ್ನು ಖರೀದಿಸಿದ ಖರೀದಿದಾರನೆಂದು ಹೇಳಲಾಗಿದೆ.

8. ಅಧಿವಿಚಾರಣಾ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ಪ್ರಾ.ಸಾ .1 ಲೋಕೇಶ, ಪ್ರಾ.ಸಾ .2 ಲಕ್ಷ್ಮಮ್ಮ, ಪ್ರಾ.ಸಾ .3 ಹನುಮಪ್ಪ ಇವರ ಮೌಖಿಕ ಸಾಕ್ಷ್ಯ ಎ ಹಾಗೂ ಪಿ .1 ರಿಂದ ಪಿ .16 ರವರೆಗಿನ ನಿಶಾನೆಗಳ ರೂಪದಲ್ಲಿರುವ ದಸ್ತಾವೇಜೀಯ ಸಾಕ್ಷ್ಯ ಎಲಾ ಹಾಗೂ ಡಿ.ಡಬ್ಲ್ಯು 1 ರಿಂದ 3 ರವರೆಗಿನ ಮೌಖಿಕ ಸಾಕ್ಷ್ಯ ಹಾಗೂ ನಿಶಾನೆ ಡಿ .1 ರಿಂದ ಡಿ .34 ರ ರೂಪದಲ್ಲಿರುವ ದಸ್ತಾವೇಜೀಯ ಸಾಕ್ಷ್ಯವನ್ನು ಸಮನ್ವಯಗೊಳಿಸಿದ್ದಾರೆ.

9. ತಮ್ಮ ಮುಂದೆ ಲಭ್ಯವಿರುವ ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯವನ್ನು ಮೌಲ್ಯ ನಿರ್ಧಾರ ಮಾಡಿದ ಮೇಲೆ ಹಾಗೂ ಮೂಲ ದಾವೆಸಂಖ್ಯೆ: 125/2001 ರಲ್ಲಿ ಹೊರಡಿಸಿದದಿನಾಂಕ: 28.10.2002 ರ ಪ್ರಶ್ನಿತ ತೀರ್ಪಿನ ಮೂಲಕ ಉಭಯ ಪಕ್ಷಕಾರರ ವಕೀಲರ ವಾದವನ್ನು ಆಲಿಸಿದ ನಂತರ, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ದಾವೆಯನ್ನು ಡಿಗ್ರಿಗೊಳಿಸಿದ್ದು, 1 ನೇ ಸಂಖ್ಯೆಯ ವಾದಿ ಪಾರ್ವತಮ್ಮ ಹಾಗೂ 2 ನೇ ವಾದಿ ಲೋಕೇಶ್, ಎಚ್ ಇವರು ಮೃತ ಹನುಮಣ್ಣನ ಪತ್ನಿ ಹಾಗೂ ಪುತ್ರರಾಗಿದ್ದಾರೆಂದು ಘೋಷಿಸಿದ್ದಾರೆ.ಅಷ್ಟೆ ಅಲ್ಲದೆ, ಅಧಿವಿಚಾರಣಾ ನ್ಯಾಯಾಧೀಶರು, ಇದು ವಾದಿಗಳಿಗೆ ನಿರ್ಬಂಧಕವಾಗಿರುವುದಿಲ್ಲವೆಂದು ಅಭಿಪ್ರಾಯಪಡುವ ಮೂಲಕ,ದಿನಾಂಕ: 15.12.1994 ರ ಮೂಲ ದಾವೆಸಂಖ್ಯೆ: 515/1992 ರಲ್ಲಿರುವ ಮೊದಲಿನ ದಾವೆಯಲ್ಲಿ ಹೊರಡಿಸಿದ ತೀರ್ಪು ಹಾಗೂ ಡಿಕ್ರಿಯನ್ನು ವಜಾಗೊಳಿಸಿರುತ್ತಾರೆ.

10. ಆರ್.ಎ.ಸಂಖ್ಯೆ: 38/2002 ರಲ್ಲಿ ಹೊರಡಿಸಿದದಿನಾಂಕ: 10.11.2004 ರ ಪ್ರಶ್ನಿತ ಆದೇಶದ ಮೂಲಕ, ಮಾನ್ಯ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು, ಚಿಕ್ಕಮಗಳೂರು ಇವರು, 1 ಹಾಗೂ 2 ನೇ ಪ್ರತಿವಾದಿಗಳು ಹೂಡಿದ ಅಪೀಲನ್ನು ಪುರಸ್ಕರಿಸಿ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪು ಡಿಕ್ರಿಯನ್ನು ತಳ್ಳಿಹಾಕಿದ್ದರ ಪರಿಣಾಮವಾಗಿ, ವಾದಿಗಳು ಸಲ್ಲಿಸಿದ ಮೂಲ ದಾವೆಸಂಖ್ಯೆ: 125/2001 ನ್ನು ವಜಾಗೊಳಿಸಿದ್ದಾರೆ.

11. ವಿಚಾರಣಾ ನ್ಯಾಯಾಲಯಗಳು ದಾಖಲಿಸಿದ ಮೇಲಿನ ಭಿನ್ನವಾದ ನಿರ್ಣಯಗಳಿಂದ ಬಾಧಿತರಾಗಿರುವ ವಾದಿಗಳು ಈ ನ್ಯಾಯಾಲಯದ ಮುಂದೆ ಬಂದಿರುತ್ತಾರೆ.

12.ದಿನಾಂಕ: 25.01.2005 ರಂದು ಪರಿಗಣನೆಗಾಗಿ ಮೇಲಿನ ಅಪೀಲನ್ನು ಸ್ವೀಕರಿಸುವಾಗ, ಈ ನ್ಯಾಯಾಲಯವು, ಈ ಮುಂದಿನ ಮುಖ್ಯವಾದ ಕಾನೂನು ಪ್ರಶ್ನೆಗಳನ್ನು ರೂಪಿಸಿರುತ್ತದೆ.

" 1) ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪನ್ನು ಹಾಗೂ ಡಿಕ್ರಿಯನ್ನು ವಿಪರ್ಯಯಗೊಳಿಸಿದ ಮೊದಲ ಅಪೀಲು ನ್ಯಾಯಾಲಯದ ನಿರ್ಣಯವು, ಪ್ರಾ.ಸಾ .1 ಹಾಗೂ 2 ರ ಸಾಕ್ಷ್ಯವನ್ನು ತಿರಸ್ಕರಿಸಿ ಹಾಗೂ ಅಪೀಲುದಾರನ ಹೆಸರಿನಲ್ಲಿ ನಮೂದಿನ ಬದಲಾವಣೆಗಾಗಿ ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ ಎನ್ನುವ ಆಧಾರದ ಮೇಲೆ ವಿಕೃತ ಮತ್ತು ಅನಿಯಂತ್ರಿತವಾಗಿದೆಯೇ?

ದಿನಾಂಕ:25.4.2019 ರಂದು ಈ ನ್ಯಾಯಾಲಯವು ರೂಪಿಸಿದ ಹೆಚ್ಚುವರಿ ಕಾನೂನಿನ ಪ್ರಶ್ನೆಗಳು

1) ಹನುಮಣ್ಣನ ಪತ್ನಿಯಾದಂಥ 1 ನೇ ವಾದಿಯು ಕ್ಲೇಮು ಮಾಡಿರುವ ವೈವಾಹಿಕ ಸಂಬಂಧವು ಸಾಕ್ಷ್ಯದ ಮೂಲಕ ಸ್ವತಂತ್ರ ಸನ್ನಿವೇಶಗಳ ಮೂಲಕ ನ್ಯಾಯಾಲಯದ ನ ಂ ಬಿಕೆಯನ್ನು ಮೂಡಿಸಿ ಸಮರ್ಥಿಸುತ್ತವೆಯೇ?

ii) ವಾದಿಗಳು, 1 ಹಾಗೂ 2 ನೇ ಪ್ರತಿವಾದಿಗಳನ್ನು ದಾವಾ ಅನುಸೂಚಿತ ಸ್ವತ್ತಿಗೆ ಉತ್ತರವರ್ತಿಯಾಗುವುದರಿಂದ ಹೊರತುಪಡಿಸಲು ಅರ್ಹರಾಗಿದ್ದಾರೆಯೇ?

iii) ಮೂಲ ದಾವೆಸಂಖ್ಯೆ: 515/1992 ರಲ್ಲಿ ಮೊದಲಿನ ದಾವೆಯಲ್ಲಿ ಹೊರಡಿಸಲಾದ ಪ್ರಶ್ನಾತೀತವಾದ ಏಕ-ಪಕ್ಷೀಯ ಡಿಕ್ರಿಯು, ಪೂರ್ವ ನ್ಯಾಯ ನಿರ್ಣಯದಂತೆ ಪ್ರವರ್ತಿಸುತ್ತದೆಯೆ?

iv) ಮೂಲ ದಾವೆಸಂಖ್ಯೆ: 515/1992 ರಲ್ಲಿ ಮೊದಲಿನ ದಾವೆಯಲ್ಲಿ ವಿಷಯವನ್ನು ನ್ಯಾಯ ನಿರ್ಣಯ ಮಾಡಿದಾಗ, ಹಾಗೂ ಅಧಿವಿಚಾರಣಾ ನ್ಯಾಯಾಲಯವು, ಮೂಲ ದಾವೆಸಂಖ್ಯೆ: 515/1992 ರಲ್ಲಿ ಹೊರಡಿಸಲಾದ ತೀರ್ಪನ್ನು ತಳ್ಳಿ ಹಾಕುವುದನ್ನು ಸಮರ್ಥಿಸುವಾಗ ಪ್ರಸ್ತುತ ದಾವೆಯನ್ನು ಪುರಸ್ಕರಿಸುವುದರಿಂದ ಅಧಿವಿಚಾರಣಾ ನ್ಯಾಯಾಲಯವನ್ನು ತಡೆಹಿಡಿಯಲಾಗಿತ್ತೆ?

V) ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಹೊರಡಿಸಿದ ತೀರ್ಪು ಹಾಗೂ ಡಿಗ್ರಿಗೆ ಮೂಲ ದಾವೆಸಂಖ್ಯೆ: 515/1992 ರಲ್ಲಿ ಮೊದಲಿನ ದಾವೆಯಲ್ಲಿ ಹೊರಡಿಸಿದ ತೀರ್ಪು ಹಾಗೂ ಡಿಕ್ಕಿಯನ್ನು ಜಾರಿಗೊಳಿಸುವುದರ ವಿರುದ್ಧ ನಿರ್ಬಂಧ ಹೇರಲಾಗಿದೆಯೇ?

ಹೆಚ್ಚುವರಿ ಕಾನೂನುಸಂಖ್ಯೆ: 11 ರ ಪ್ರಶ್ನೆಯ ವಿವಾದಾಂಶಗಳು ಕಾನೂನಿನ iii, iv ಹಾಗೂ V ನೇ ಪ್ರಶ್ನೆಗೂ ವ್ಯಾಪಿಸಿದ್ದರೂ, ಈ ಸನ್ನಿವೇಶಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ವಿಭಾಗಿಸಲಾಗಿದೆ.

13. ವಾದಿ-ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಜಿ.ಎಸ್. ಬಾಲಗಂಗಾಧರ್ರವರು, ನ್ಯಾಯಾಲಯಕ್ಕೆ ನಂಬಿಕೆಯನ್ನು ಮೂಡಿಸಲು 1 ಹಾಗೂ 2 ನೇ ವಾದಿಗಳು ಮಂಡಿಸಿದ ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯವು ಸಮರ್ಪಕವಾಗಿದೆಯೆಂದು ನಿವೇದಿಸಿದ್ದು, ಅವರ ಸಾಕ್ಷ್ಯದ ಮೌಲ್ಯ ನಿರ್ಣಯ ಮಾಡಿದ ಮೇಲೆ ಅಧಿವಿಚಾರಣಾ ನ್ಯಾಯಾಲಯವು, ದಾವೆಯನ್ನು ಸರಿಯಾದ ರೀತಿಯಲ್ಲಿಯೇ ಡಿಕ್ಕಿಗೊಳಿಸಿದೆಯೆಂದು ನಿವೇದಿಸಿದ್ದಾರೆ.ಆದಾಗ್ಯೂ, ಮೊದಲನೇ ಅಪೀಲು ನ್ಯಾಯಾಲಯವು, ಸದರಿ ತೀರ್ಪನ್ನು ತಳ್ಳಿಹಾಕುವಲ್ಲಿ ಗಂಭೀರವಾದ ದೋಷವೆಸಗಿರುವ ಕಾರಣದಿಂದ, ವಾದಿಗಳು ಈ ನ್ಯಾಯಾಲಯದ ಮುಂದೆ ಬರುವಂತಾಗಿದೆ.

14. ದಾವಾ ಸ್ವತ್ತಿನ ಮೇಲಿರುವ ವಾದಿಗಳ ಹಕ್ಕು ಹಾಗೂ ಉತ್ತರಾಧಿಕಾರವನ್ನು ವಂಚಿಸುವ ಸಲುವಾಗಿ, 1 ಹಾಗೂ 2 ನೇ ಸಂಖ್ಯೆಯ ಪ್ರತಿವಾದಿಗಳು, ಹನುಮಣ್ಣನಿಗೆ ಸಂಬಂಧಿಸಿದಂತೆ ಅನುಕ್ರಮವಾಗಿ 1 ಸಂಖ್ಯೆಯ ಹಾಗೂ 2 ನೇ ಸಂಖ್ಯೆಯ ವಾದಿಗಳ ವೈವಾಹಿಕ ಹಾಗೂ ಪಿತೃತ್ವ ಸಂಬಂಧವನ್ನು ಸಂದೇಹಪಡುವ/ವಿವಾದ ಮಾಡುವ ಮಟ್ಟಕ್ಕೆ ಇಳಿದಿದ್ದಾರೆ.ನಿಶಾನೆ ಪಿ .11 ಎಂದು ಗುರುತಿಸಲಾದ ಮತದಾರ ಗುರುತಿನ ಚೀಟಿಯು, 2 ನೇ ಸಂಖ್ಯೆಯ ವಾದಿ ಎಚ್. ಲೋಕೇಶನು ಹನುಮಣ್ಣನ ಮಗನಾಗಿದ್ದು ಹಾಗೂ 1 ನೇ ಸಂಖ್ಯೆಯ ವಾದಿಯು ಹನುಮಣ್ಣನ ಪತ್ನಿಯಾಗಿರುವಳೆಂಬುದನ್ನು ಸುಸ್ಪಷ್ಟವಾಗಿ ರುಜುವಾತುಪಡಿಸುತ್ತದೆ.ಸದರಿ ದಸ್ತಾವೇಜೀಯ ಸಾಕ್ಷ್ಯವನ್ನು ಮೊದಲನೇ ಅಪೀಲು ನ್ಯಾಯಾಲಯವು ನಂಬದಿರುವುದಕ್ಕೆ ಯಾವುದೇ ಕಾರಣವಿಲ್ಲ.

15. 1 ಹಾಗೂ 2ನೇ ಪ್ರತಿವಾದಿಗಳ ಪರವಾಗಿ ಹಾಜರಾಗಿರುವ ಮಾನ್ಯ ಶ್ರೀ ಕೆ. ಶ್ರೀಹರಿಯವರು, ಹನುಮಣ್ಣನೊಟ್ಟಿಗೆ 1 ಹಾಗೂ 2 ನೇ ವಾದಿಗಳ ವೈವಾಹಿಕ ಹಾಗೂ ಪಿತೃತ್ವಕ್ಕೆ ಸಂಬಂಧಿಸಿದ ಪ್ರಧಾನ ಪ್ರಶ್ನೆಯನ್ನು, ಮೊದಲಿನ ದಾವೆಯಲ್ಲಿ, ಪಾರ್ವತಮ್ಮ ಹಾಗೂ ಲೋಕೇಶ ವಿರುದ್ಧದ ( 1 ನೇ ಸಂಖ್ಯೆಯ ಎದುರುದಾರರ ಮಗನಾಗಿರುವ 2 ನೇ ಸಂಖ್ಯೆಯ ಎದುರುದಾರರು) ಕರಿಯಪ್ಪನು ಸಲ್ಲಿಸಿದ ಈ ಹಿಂದಿನ ಮೂಲ ದಾವೆಸಂಖ್ಯೆ: 515/1992 ರಲ್ಲಿ ಈಗಾಗಲೇ ನ್ಯಾಯ ನಿರ್ಣಯ ಮಾಡಲಾಗಿದೆಯೆಂದು ನಿವೇದಿಸಿದ್ದರು.ಅಷ್ಟೇ ಅಲ್ಲದೆ, ಸದರಿ ಈ ಹಿಂದಿನ ದಾವೆಯಲ್ಲಿಯೇ ಹಕ್ಕು ಹಾಗೂ ಸ್ವಾಧೀನತೆಯ ಪ್ರಶ್ನೆಯನ್ನೂ ಕೂಡ ಪಾರ್ವತಮ್ಮ ಹಾಗೂ ಲೋಕೇಶ ವಿರುದ್ಧವಾಗಿ ಹಾಗೂ 2 ನೇ ಸಂಖ್ಯೆಯ ಎದುರುದಾರನ ಪರವಾಗಿದೆಯೆಂದು ನಿವೇದಿಸಿರುವರು, ಅಷ್ಟೇ ಅಲ್ಲದೆ, ಇದರಲ್ಲಿನ ವಾದಿಗಳು ಅಪೀಲುದಾರರು ಸದರಿ ತೀರ್ಪಿನ ವಿರುದ್ಧ ಯಾವುದೇ ಅಪೀಲು ಸಲ್ಲಿಸಲು ಬಯಸದಿದ್ದರಿಂದ, ಇದು ಅಂತಿಮ ಘಟ್ಟ ತಲುಪಿದೆ.ಹಾಗಾಗಿ ವಾದಿಗಳು ಅಪೀಲುದಾರರು ಸಲ್ಲಿಸಿದ ಪ್ರಸ್ತುತ ದಾವೆಯು ಪೂರ್ವ ನ್ಯಾಯ ನಿರ್ಣಯದ ಸಿದ್ಧಾಂತದ ಮೇರೆಗೆ ಯಾವುದೇ ರೀತಿಯಲ್ಲಿ ಊರ್ಜಿತಯೋಗ್ಯವಾಗಿರಲಿಲ್ಲ.1 ನೇ ವಾದಿಯ ಹಾಗೂ ಹನುಮಣ್ಣನ ವೈವಾಹಿಕ ಸಂಬಂಧ ಹಾಗೂ ವಾದಿಸಂಖ್ಯೆ: 2 ಲೋಕೇಶ್ ಎಚ್ ಹಾಗೂ ಹನುಮಣ್ಣನ ನಡುವಿನ ಪಿತೃತ್ವದ ಸಂಬಂಧವನ್ನು ತೋರಿಸುವ ಯಾವುದೇ ದಸ್ತಾವೇಜುಗಳನ್ನು ವಾದಿಗಳು ಹಾಜರುಪಡಿಸಿರುವುದಿಲ್ಲ.

16. ಮೂಲ ದಾವೆಸಂಖ್ಯೆ: 515/1992 ರಲ್ಲಿನ ಮೊದಲಿನ ವ್ಯವಹರಣೆಗಳಲ್ಲಿ ಪ್ರಸ್ತುತ ದಾವೆಯಲ್ಲಿ ವಾದಿಗಳಾಗಿರುವ, ಪ್ರತಿವಾದಿಗಳು, ವಾದವನ್ನು ವಾದಿಸುವುದರಿಂದ ತಮ್ಮನ್ನು ಪ್ರತಿಬಂಧಿಸಲಾಗಿದೆಯೆಂದು

ಮತ್ತು ಸದರಿ ತೀರ್ಪನ್ನು ವಾದಿಗಳಿಗೆ ಗೊತ್ತಾಗದ ಹಾಗೆ ಹೊರಡಿಸಲಾಗಿದೆಯೆಂದು ಆರೋಪಿಸಲಾಗಿದೆ. ಆದುದರಿಂದ, ತೀರ್ಪು ಹಾಗೂ ಮೂಲ ದಾವೆಸಂಖ್ಯೆ: 515/1992 ರಲ್ಲಿ ಮಾಡಿದ ಡಿಕ್ರಿಯನ್ನು ಪರಿಣಾಮಕಾರಿಗೊಳಿಸಲಾಗುವುದಿಲ್ಲ.ಅವರು ಪ್ರಸ್ತುತ ದಾವೆಯನ್ನು ಹೂಡಿದ್ದು, ಇದರಲ್ಲಿ, ಮೂಲ ದಾವೆಸಂಖ್ಯೆ: 515/1992 ರಲ್ಲಿ ಮೊದಲಿನ ದಾವೆಯಲ್ಲಿ ಹೊರಡಿಸಲಾದ ತೀರ್ಪನ್ನು ರದ್ದುಪಡಿಸುವಂತೆ ಮನವಿ ಮಾಡಲಾಗಿದೆ.

17. ಮೂಲ ದಾವೆಸಂಖ್ಯೆ: 125/2001 ರಲ್ಲಿನ ಪ್ರಸ್ತುತ ದಾವೆಯನ್ನು ಸಲ್ಲಿಸುವ ಸಮಯದಲ್ಲಿ, ಮೂಲ ದಾವೆಸಂಖ್ಯೆ: 515/1992 ರಲ್ಲಿ ಹೊರಡಿಸಿದ ತೀರ್ಪು ಹಾಗೂ ಡಿಗ್ರಿಯು ಜಾರಿಯಲ್ಲಿತ್ತಾದರೂ, ಇದು ಅವರಿಗೆ ಬಂಧನಕಾರಿಯಾಗಿರಲಿಲ್ಲ ಎಂಬುದು ವಾದಿಗಳಿಗೆ ತಿಳಿದಿತ್ತು.

18. ದಿನಾಂಕ ಮೂಲ ದಾವೆಸಂಖ್ಯೆ: 515/1992 ರಲ್ಲಿ ಹೊರಡಿಸಲಾದ ಸದರಿ ತೀರ್ಪು ಹಾಗೂ ಡಿಕ್ಕಿಯನ್ನು ತಳ್ಳಿಹಾಕುವುದಕ್ಕಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 13 ನೇ ನಿಯಮದ IX ನೇ ಆದೇಶದ ಮೇರೆಗೆ ವಾದಿಗಳು ಯಾವುದೇ ಅರ್ಜಿಯನ್ನು ಸಲ್ಲಿಸಿರಲಿಲ್ಲ ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆಯ XLI ನೇ ಆದೇಶದ ಮೇರೆಗೆ ಅಪೀಲನ್ನು ಸಲ್ಲಿಸಲು ಕೋರಿರಲಿಲ್ಲ.

19. ವಾದಿಗಳು ಘೋಷಣೆ ಹಾಗೂ ನಿರ್ಬಂಧಕಾಜ್ಞೆಗಾಗಿ, ಮೂಲ ದಾವೆಸಂಖ್ಯೆ: 515/1992 ರಲ್ಲಿನ ಮೊದಲಿನ ವ್ಯವಹರಣೆಗಳನ್ನು ಕಾನೂನಿನಲ್ಲಿ ಅಸಿಂಧುಗೊಳಿಸಲಾಯಿತೆಂದು ಘೋಷಿಸುವುದಕ್ಕಾಗಿ ಹೆಚ್ಚುವರಿ ಮನವಿಯನ್ನು ಮಾಡಿಕೊಂಡು ಪ್ರಸ್ತುತ ದಾವೆಯನ್ನು ಸಲ್ಲಿಸಿದ್ದಾರೆ.

20. ವಾದಿಗಳ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಮೂಲ ದಾವೆ 515/1992 ರಲ್ಲಿ ಹೊರಡಿಸಿಲಾದ ಏಕಪಕ್ಷೀಯ ಡಿಗ್ರಿಯನ್ನು ವಜಾಗೊಳಿಸಲು ಸಿವಿಲ್ ಪ್ರಕ್ರಿಯಾ ಸಂಹಿತೆಯ 13 ನೇ ನಿಯಮದ IX ನೇ ಆದೇಶದ ಮೇರೆಗೆ ವಾದಿಗಳು ಅರ್ಜಿಯನ್ನು ಸಲ್ಲಿಸಿರಲಿಲ್ಲ, ಏಕೆಂದರೆ ಪರಿಣಾಮಕಾರಿಯಾಗಿ ಮೂಲ ದಾವೆ ಸಂಖ್ಯೆ:515/1992 ರಲ್ಲಿ ಅವರು ತಮ್ಮ ಪ್ರಕರಣವನ್ನು ನಡೆಸುವುದರಿಂದ ಅವರನ್ನು ಪ್ರತಿಬಂಧಿಸಲಾಗಿತ್ತೆಂದು ನಿವೇದಿಸಿದ್ದಾರೆ.

21. ಏಕಪಕ್ಷೀಯ ಡಿಕ್ಕಿ ಹಾಗೂ ನಿಯತ ಡಿಕ್ರಿಯ ನಡುವೆ ಯಾವುದೇ ವ್ಯತ್ಯಾಸವಿಲ್ಲ.ಒಂದೇ ಪ್ರಕ್ರಿಯಾ ವ್ಯತ್ಯಾಸವೇನೆಂದರೆ, 13 ನೇ ನಿಯಮದ IX ನೇ ಆದೇಶದ ಉಪಬಂಧಗಳನ್ನು ಕೋರುವ ಹಕ್ಕು ಏಕಪಕ್ಷೀಯ ಡಿಕ್ರಿಯನ್ನು ಮರುಪಡೆಯುವುದಾಗಿದೆ ಮತ್ತು ಪಕ್ಷಕಾರರಿಗೆ ಮೇಲ್ಮನವಿ ಸಲ್ಲಿಸಲು ಹಕ್ಕನ್ನು ನೀಡುವುದಾಗಿದೆ.

22. ನಮ್ಮ ಮುಂದಿರುವ ಪ್ರಕರಣದಲ್ಲಿ, ಮೊದಲಿನ ದಾವೆಯಲ್ಲಿ ಪ್ರತಿವಾದಿಗಳಾಗಿರುವ ಪ್ರಸ್ತುತ ಪ್ರಕರಣದಲ್ಲಿನ ವಾದಿಗಳು ಎರಡೂ ಉಪಬಂಧಗಳನ್ನು ಕೋರಿರುವುದಿಲ್ಲ.ಮೂಲ ದಾವೆಸಂಖ್ಯೆ: 515/1992 ರಲ್ಲಿನ ದಾವೆಯು ವಿಲೇವಾರಿಯ ದಿನಾಂಕಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಇದನ್ನುದಿನಾಂಕ: 15.12.1994 ರಂದು ವಿಲೆ ಮಾಡಲಾಗಿತ್ತು ಹಾಗೂ ಬಾಧಿತರಾದ ಪಕ್ಷಕಾರರು ಎಂದರೆ ವಾದಿಗಳು, ಸದರಿ ಏಕಪಕ್ಷೀಯ ತೀರ್ಪು ಹಾಗೂ ಡಿಕ್ಕಿಯ ವಿರುದ್ಧ ಯಾವುದೇ ಅಪೀಲನ್ನು ಸಲ್ಲಿಸಿಲ್ಲವೆಂಬುದು ನಿರ್ವಿವಾದ.ಆದರೆ ಅವರುದಿನಾಂಕ: 21.3.1996 ರಂದು ಮೂಲ ದಾವೆಸಂಖ್ಯೆ: 125/2001 ರಲ್ಲಿ ಹೊಸ ದಾವೆಯನ್ನು ಹೂಡುವುದನ್ನು ಆಯ್ಕೆ ಮಾಡಿಕೊಂಡಿದ್ದಾರೆ.

23. ಈಗ ವಾದಿಗಳು ಎರಡು ಅಂಶಗಳನ್ನು ರುಜುವಾತುಪಡಿಸುವ ಅಗತ್ಯವಿದೆ.ಎಂದರೆ ( 1) ಮೂಲ ದಾವೆಸಂಖ್ಯೆ: 515/1992 ರಲ್ಲಿನ ಮೊದಲಿನ ದಾವೆಯಲ್ಲಿ ಹೊರಡಿಸಿದ ತೀರ್ಪ ಹಾಗೂ ಡಿಕ್ಕಿಯು ಪ್ರಸ್ತುತ ದಾವೆಯಲ್ಲಿ ಪ್ರತಿವಾದಿಗಳು ಮಾಡಿದ ಮೋಸದ ಪರಿಣಾಮವಾಗಿದೆ, ( 2) ವಾದಿಗಳಿಗೆ ಸಮನುಗಳನ್ನು ಜಾರಿಗೊಳಿಸಿರುವುದನ್ನು ಗಮನಿಸದೆ ಮತ್ತು ವಾದಿಗಳು ಈ ವಿಷಯವನ್ನು ಮುಂದುವರಿಸಲು ವಕೀಲರನ್ನು ನೇಮಿಸುವಾಗ ಪ್ರತಿವಾದಿಗಳು ಮೂಲ ದಾವೆಸಂಖ್ಯೆ: 515/1992 ರಲ್ಲಿನ ಮೊದಲಿನ ದಾವೆಯಲ್ಲಿ ವಾದಿಗಳು ಸ್ಪರ್ಧಿಸದಂತೆ ಮಾಡಿದರು.

24. ಮೊದಲನೆಯದಾಗಿ, ಪ್ರಕರಣದ ಸನ್ನಿವೇಶಗಳು ಹಾಗೂ ಅಂಶಗಳ ಹಿನ್ನೆಲೆಯಲ್ಲಿ ಈ ವಾದಿಗಳಿಗೆ ಅನುಸೂಚಿತ ಸ್ವತ್ತಿನ ಮೇಲಿರುವ ಹಕ್ಕಿನ ಘೋಷಣೆಗಾಗಿ ಡಿಗ್ರಿಯ ಹಕ್ಕು ಪಡೆದುಕೊಳ್ಳುವುದು, ಮೃತ ಹನುಮಣ್ಣನ ವಿಧವೆ ಪತ್ನಿ ಹಾಗೂ ಮಗನಾಗಿ ಕಾನೂನುಸಮ್ಮತ ಪ್ರತಿನಿಧಿಗಳಾಗಿರುವ ಅವನೊಂದಿಗಿನ ತಮ್ಮ

ಸಂಬಂಧವನ್ನು ಅವಲಂಬಿಸಿರುತ್ತದೆ.ಮೊದಲಿನ ಸುತ್ತಿನ ವ್ಯವಹರಣೆಗಳಲ್ಲಿ, ಪ್ರಸ್ತುತ ವ್ಯವಹರಣೆಗಳಲ್ಲಿನ ಎರಡನೇ ಪ್ರತಿವಾದಿಯಾಗಿರುವ ಕರಿಯಪ್ಪನು ಸಲ್ಲಿಸಿದ ಮೂಲ ದಾವೆಸಂಖ್ಯೆ: 515/1992 ರ ದಾವೆಯನ್ನು ಡಿಗ್ರಿಗೊಳಿಸಲಾಗಿದೆ.ಎರಡನೆಯದಾಗಿ ಹನುಮಣ್ಣನ ಹಕ್ಕಿನ ಬಗ್ಗೆ ಯಾವುದೇ ಪಕ್ಷಕಾರರೂ ಪ್ರಶ್ನಿಸಿಲ್ಲ.ಮೂರನೆಯದಾಗಿ, ವಾದಿಗಳು ಪ್ರಸ್ತುತ ದಾವೆಯನ್ನು ಹೂಡಲು ಏನಾದರೂ ಪ್ರತಿಷೇಧವಿದೆಯೇ ಹಾಗೂ ಸಿವಿಲ್ ಪ್ರಕ್ರಿಯಾ ಸಂಹಿತೆಯ 11 ನೇ ಪ್ರಕರಣದ ಮೇರೆಗೆ ಪೂರ್ವ ನ್ಯಾಯ ನಿರ್ಣಯ ಸಿದ್ಧಾಂತದ ಮೂಲಕ ದಾವೆಗೆ ಧಕ್ಕೆಯುಂಟು ಮಾಡಲಾಗಿದೆಯೇ ಎಂಬುದಾಗಿದೆ.

25. ಎರಡನೇ ಪ್ರತಿವಾದಿಯಾದ-ಲೋಕೇಶ್ ಎಚ್. 9, ಇವರಿಗೆ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು ನೀಡಿದದಿನಾಂಕ: 22.7.92 ರ ನಿಶಾನೆ ಡಿ .2-ಶಾಲಾ ಹಿಂಬರಹ ರಸೀದಿಯಲ್ಲಿ ಅವನ ತಂದೆಯ ಹೆಸರನ್ನು ಸಿದ್ದಪ್ಪ ' ಎಂದು ನಮೂದಿಸಲಾಗಿದೆಯೇ ಹೊರತು ' ಹನುಮಣ್ಣ ' ಎಂದು ಸೂಚಿಸಿರುವುದಿಲ್ಲ ಹಾಗೂ ಹುಟ್ಟಿದ ದಿನಾಂಕವನ್ನು 24.09.1968 ' ಎಂದು ನಮೂದಿಸಲಾಗಿದ್ದು, ಅವನ ಪ್ರವೇಶಾತಿ ಸಂಖ್ಯೆಯನ್ನು 12/75-76 ' ಎಂದು ಸೂಚಿಸಲಾಗಿದೆ ಹಾಗೂ ಅವನ ಜಾತಿಯನ್ನು ಎ.ಕೆ., (ಆದಿ ಕರ್ನಾಟಕ) ಎಂದು ಸೂಚಿಸಲಾಗಿದೆ ಎಂಬುದನ್ನು ಇಲ್ಲಿ ದಾಖಲಿಸುವುದು ಅತ್ಯಗತ್ಯ.

26. ಪ್ರತಿವಾದಿಗಳ ಪರ ಹಾಜರಾಗಿರುವ ಮಾನ್ಯ ನ್ಯಾಯವಾದಿಯೂ ಸಹ ನಿಶಾನೆ, ಡಿ -31 ಮತದಾರರ ಪಟ್ಟಿಯಲ್ಲಿ 2 ನೇ ವಾದಿಯ ಹೆಸರನ್ನು ಲೋಕೇಶ್ ಹನುಮಣ್ಣ ಎಂಬುದರ ಬದಲು ಲೋಕೇಶಪ್ಪ ಸಿದ್ದಪ್ಪ ಎಂದು ತೋರಿಸಲಾಗಿದೆ ಹಾಗೂ 1 ನೇ ವಾದಿಯ ಹೆಸರನ್ನು ಪಾರ್ವತಮ್ಮ ಹನುಮಣ್ಣ ಎಂದು ಸೂಚಿಸುವ ಬದಲು ಪಾರ್ವತಮ್ಮ ಸಿದ್ದಪ್ಪ ಎಂದು ಸೂಚಿಸಲಾಗಿದೆ ಎಂದು ನಿವೇದಿಸಿದ್ದಾರೆ.ಇದಕ್ಕೆ ಪ್ರತಿಯಾಗಿ ವಾದಿಗಳ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, 2 ನೇ ಸಂಖ್ಯೆಯ ವಾದಿಯ ಮತದಾರರ ಗುರುತಿನ ಚೀಟಿ ನಿಶಾನೆ ಪಿ .11 ರಲ್ಲಿ ಲೋಕೇಶಪ್ಪ ಬಿನ್ ಹನುಮಪ್ಪ ಎಂದು ಸೂಚಿಸಲಾಗಿದೆಯೆಂದು ನಿವೇದಿಸಿದ್ದಾರೆ.

27. ಮೂಲ ದಾವೆಸಂಖ್ಯೆ: 515/1992 ರಲ್ಲಿನ ವ್ಯವಹರಣೆಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ವಾದಿಗಳ ಕ್ಲೇಮು ಏನೆಂದರೆ, ವ್ಯವಹರಣೆಗಳಲ್ಲಿ ಭಾಗವಹಿಸುವುದರಿಂದ ಅವರನ್ನು ತಡೆಯಲಾಗಿದೆ ಹಾಗೂ ಅವರನ್ನು ಏಕಪಕ್ಷೀಯವಾಗಿ ಇಡಲಾಗಿತ್ತೆಂದು ಹಾಗೂ ಎರಡನೇ ಪ್ರತಿವಾದಿಯು ವಾದಿಗಳಿಗೆ ಗೊತ್ತಾಗದ ಹಾಗೆ ಡಿಕ್ರಿಯನ್ನು ಪಡೆದುಕೊಂಡಿದ್ದಾರೆ ಎಂಬುದಾಗಿದೆ.ಹೀಗಾಗಿ ಮೂಲ ದಾವೆಸಂಖ್ಯೆ: 125/2001 ನ್ನು ಸಲ್ಲಿಸುವುದರಿಂದ ಅವರನ್ನು ವಂಚಿಸಲಾಗಿದೆ.

28. ಪ್ರಕರಣದ ಸಂದರ್ಭ ಮತ್ತು ಸನ್ನಿವೇಶಗಳ ಹಿನ್ನೆಲೆಯಲ್ಲಿ ಮೂಲ ದಾವೆಸಂಖ್ಯೆ: 515/1992 ರಲ್ಲಿ ದಾವೆಯನ್ನು ಪೂರ್ಣವಾಗಿ ವಾದಿಸಲು ಸಾಧ್ಯವಾಗಿರಲಿಲ್ಲವೆಂಬುದನ್ನು ತಳ್ಳಿಹಾಕಲಾಗುವುದಿಲ್ಲ.ಸದರಿ ದಾವೆಯಲ್ಲಿನ ಪ್ರತಿವಾದಿಗಳನ್ನು, ಡಿಕ್ರಿಯನ್ನು ಪಡೆದುಕೊಳ್ಳಲು ಇದರಲ್ಲಿನ ವಾದಿಗಳಿಗೆ ಮೋಸ ಮಾಡುವ ಮೂಲಕ ಅವರನ್ನು ಪ್ರತಿಬಂಧಿಸಿದ್ದರು ಎಂಬ ವಾದವನ್ನು ಗಮನದಲ್ಲಿಟ್ಟುಕೊಂಡು, ಯಾವುದೇ ವ್ಯವಹರಣೆಗಳನ್ನು ಪ್ರಾರಂಭಿಸಿರಲಿಲ್ಲ ಹಾಗೂ ಎರಡನೇ ಉದಾಹರಣೆಯಲ್ಲಿ ಅನುಸೂಚಿತ ಸ್ವತ್ತು ಮಾತ್ರ ಆಗಿರಲಿಲ್ಲ.ದಾವೆಯ ವಸ್ತುವಿಷಯವಾಗಿರದೆ ಇಂಥ ವಿಚಿತ್ರ ಸನ್ನಿವೇಶಗಳಲ್ಲಿ ಹಕ್ಕಿನ ಕಾರಣದಲ್ಲಿ ಹೆಸರಿನ ವಿವರಣೆಯು ವ್ಯತ್ಯಾಸಗೊಂಡಿದ್ದು, ಇದರಲ್ಲಿ ಮೊದಲ ಪ್ರತಿವಾದಿಯ ಗಂಡನ ಹೆಸರು ಹಾಗೂ ಎರಡನೇ ಪ್ರತಿವಾದಿಯ ತಂದೆಯ ಹೆಸರನ್ನು ' ಹನುಮಣ್ಣ'ನ ಬದಲು ' ಸಿದ್ದಪ್ಪ ' ಎಂದು ತೋರಿಸಲಾಗಿದೆ.ಆಸ್ತಿಯನ್ನು ಲಪಟಾಯಿಸುವ ಉದ್ದೇಶಕ್ಕಾಗಿ ಅವರನ್ನು ಕುಟುಂಬದಿಂದ ಹೊರಗೆ ಹಾಕುವ ಸಲುವಾಗಿ ಹೀಗೆ ಮಾಡಲಾಗಿದೆ.ಮೂಲ ದಾವೆಸಂಖ್ಯೆ: 515/1992 ನ್ನುದಿನಾಂಕ: 15/12/1994 ರಂದು ವಿಲೆ ಮಾಡಲಾಗಿತ್ತು ಹಾಗೂ ಮೂಲ ದಾವೆಸಂಖ್ಯೆ: 125/2001 (ಮೂಲ ದಾವೆ 18/96) ನ್ನುದಿನಾಂಕ: 21.3.1996 ರಂದು ಪ್ರತಿವಾದಿಗಳು ಸಲ್ಲಿಸಿದ್ದರು ಎಂಬ ಸಂಗತಿಯನ್ನು ಗಮನಿಸಿ, ಮೂಲ ದಾವೆಸಂಖ್ಯೆ: 515/1992 ರ ವಿಲೆ ದಿನಾಂಕ ಹಾಗೂ ಪ್ರಸ್ತುತ ದಾವೆಯನ್ನು ಹೂಡುವ ದಿನಾಂಕದ ನಡುವಿನ ಎದ್ದು ಕಾಣುವಂತಹ ಅಂತರವು, ಇದು ನಡೆಯದಿದ್ದರೂ ಕೂಡ ವಾದಿಗಳಿಂದ ಉತ್ತರವನ್ನು ಬಯಸುತ್ತದೆ.

29. ವಾದಿಗಳ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಮತದಾರರ ಪಟ್ಟಿಯು ಅವರ ಸಂಬಂಧವನ್ನು ರುಜುವಾತುಪಡಿಸುವ ನಿರ್ಣಾಯಕ ದಸ್ತಾವೇಜು ಎಂದು ಪರಿಗಣಿಸಬಾರದೆಂದು ನಿವೇದಿಸಿದ್ದಾರೆ.ವಾದಿಗಳೂ ಕೂಡ ನಿಶಾನೆ ಪಿ .11 ಮತದಾರ ಗುರುತಿನ ಚೀಟಿಯನ್ನು ಅವಲಂಬಿಸಿದ್ದಾರೆಂಬುದನ್ನು ಕ್ಷಣಮಾತ್ರವೂ ಮರೆಯಲು ಸಾಧ್ಯವಿಲ್ಲ.ಪ್ರಕರಣದ ಸಂದರ್ಭ ಅಥವಾ ಸನ್ನಿವೇಶದಲ್ಲಿ, ಮತದಾರರ ಪಟ್ಟಿ ಅಥವಾ

ಮತದಾರರ ಗುರುತಿನ ಚೀಟಿಯನ್ನು ಪ್ರತ್ಯೇಕ ಸಾಕ್ಷ್ಯದ ಮೂಲಕ ಬಲವಾಗಿ ಸಮರ್ಥಿಸಬೇಕಾಗಿದೆ ಎಂಬ ಬಗ್ಗೆ ಯಾವುದೇ ಸಂಶಯ ಇರುವುದಿಲ್ಲ.ಎಂದರೆ ಗಂಡ-ಹೆಂಡತಿಯೆಂದು ತಮ್ಮನ್ನು ಸಮಾಜಕ್ಕೆ ಗೊತ್ತಾಗುವಂತೆ ಗುರುತಿಸಿಕೊಂಡು ಒಟ್ಟಿಗೆ ವಾಸಿಸುವ ಸಂಗತಿ, ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ವಿವಾಹವನ್ನು ರುಜುವಾತುಪಡಿಸುವ ಸಾಕ್ಷ್ಯಕ್ಕೆ ಬೇಕಾದ ಸಂಗತಿಗಳಾಗಿವೆ.ವಿವಾಹ ಪ್ರಮಾಣ ಪತ್ರವೊಂದನ್ನೇ ಹಿಂದೂ ವಿವಾಹದ ನಿರ್ಣಾಯಕ ಸಾಕ್ಷ್ಯವೆಂದು ಅಗತ್ಯಪಡಿಸಿದರೆ, ಆಗ ಶೇಕಡಾ 50 ಕ್ಕಿಂತ ಹೆಚ್ಚಿನ ವಿವಾಹಗಳು ನೋಂದಣಿಯಾಗಿರುವುದಿಲ್ಲ.ಪಾರ್ವತಮ್ಮ ವಾದಿಸಂಖ್ಯೆ: 1 ಇವರ ತಂಗಿಯಾಗಿರುವ ಪ್ರಾ.ಸಾ .2 ರ ಸಾಕ್ಷ್ಯವ, ಪಾರ್ವತಮ್ಮನು ದಿವಂಗತ ಹನುಮಣ್ಣನವರ ಪತ್ನಿಯಾಗಿದ್ದಳೆಂಬ ಸಾಕ್ಷ್ಯವು ನಂಬಿಕೆಯನ್ನು ಹುಟ್ಟಿಸುವುದಿಲ್ಲ.ಏಕೆಂದರೆ ಅವಳು ಪಾರ್ವತಮ್ಮನೊಟ್ಟಿಗೆ ವೈಯಕ್ತಿಕ ಆಸಕ್ತಿ ಹೊಂದಿರುವ ಮಹಿಳೆಯಾಗಿದ್ದಳು ಎಂಬುದನ್ನು ಪ್ರಮಾಣೀಕರಿಸುತ್ತದೆ.ಮೂಲ ದಾವೆಸಂಖ್ಯೆ: 515/1992 ರಲ್ಲಿನ ಶಾಲಾ ಪ್ರಮಾಣಪತ್ರ ಹಾಗೂ ಮತದಾರರ ಚೀಟಿಯು ವಾದಿಗಳ ವಾದಗಳನ್ನು ಸ್ಪಷ್ಟವಾಗಿ ಅಲ್ಲಗಳೆಯಲಾಗಿದೆ.ಈ ಸನ್ನಿವೇಶಗಳಲ್ಲಿ, ದಿವಂಗತ ಹನುಮಣ್ಣನ ಸಂಬಂಧಿಯಾಗಿರದಿದ್ದರೂ ಕೂಡ ಇಬ್ಬರೂ ವಾದಿಗಳ ಕುಟುಂಬದ ಹತ್ತಿರದ ವಾರಸುದಾರರಾಗಿ ಅಥವಾ ಸದಸ್ಯರಾಗಿ ಭಾವಿಸುವುದನ್ನು ಹೊರತುಪಡಿಸಲಾಗಿದೆ.

30. ವಾದಿಗಳು, ಪ್ರತ್ಯೇಕ ದಾವೆಯನ್ನು ತರುವ ಮೂಲಕ ವಾದಿಸಲು ಹಕ್ಕುಳ್ಳವರಾಗಿದ್ದ ಸನ್ನಿವೇಶದಿಂದಾಗಿ, ಮೂಲ ದಾವೆಸಂಖ್ಯೆ: 515/1992 ರಿಂದ ಅವರನ್ನು ಪ್ರತಿಬಂಧಿಸಲಾಯಿತೆಂದು ಅವರು ರುಜುವಾತುಪಡಿಸಿದರೆಂಬುದನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟಿರಲಿಲ್ಲ.ಕಾನೂನಿನಲ್ಲಿ ಯಾವುದನ್ನು ಕಾನೂನುಬದ್ಧವಾಗಿ ನೀಡಿಲ್ಲವೋ ಅದನ್ನು ಸಂಗತಿಗಳನ್ನು ತಿರುಚಿ ಅದನ್ನು ಅಡ್ಡಿಪಡಿಸುವ ಮೂಲಕ ಒದಗಿಸುವಂತಿಲ್ಲ ಎಂಬುದನ್ನು ತಿಳಿಸುವುದು ಅಗತ್ಯವಾಗಿರುತ್ತದೆ.ಅಷ್ಟೇ ಅಲ್ಲದೆ, ಹನುಮಣ್ಣನ ಒಡೆತನ ಹಾಗೂ ಸ್ವಾಧೀನತೆಯ ಬಗ್ಗೆ ಯಾವುದೇ ವಿವಾದವಿರುವುದಿಲ್ಲ.ಅವನು ಮರಣ ಹೊಂದಿದ್ದು, ಅವನು ಮರಣ ಹೊಂದುವವರೆಗೂ ದಾವಾ ಸ್ವತ್ತಿನ ಮಾಲೀಕನಾಗಿದ್ದನು.ಮುಂದಿನ ಪ್ರಶ್ನೆಯೇನೆಂದರೆ, ಅನುಸೂಚಿತ ಸ್ವತ್ತಿನ ಕಾನೂನುಬದ್ಧ ವಾರಸುದಾರರು ಯಾರು ಎಂಬುದು ವಾದಿಗಳು ಅನುಕ್ರಮವಾಗಿ ಹನುಮಣ್ಣನ ಪತ್ನಿ ಹಾಗೂ ಮಗ ನಾವೇ ಎಂದು ಕೇಮು ಮಾಡಿದ್ದಾರಾದರೂ, ಅದನ್ನು ಪುಷ್ಟೀಕರಿಸಲು ವಿಫಲರಾಗಿದ್ದಾರೆ.

31. ವಾದಿಯ ಎರಡನೇ ಕೋರಿಕೆಯೇನೆಂದರೆ ಮೂಲ ದಾವೆ ಸಂ. 515/1992 ರಲ್ಲಿ ಹೊರಡಿಸಿದ ಡಿಕ್ರಿಯನ್ನು ರದ್ದುಪಡಿಸಬೇಕು ಎಂಬುದಾಗಿದೆ.ಮೂಲ ದಾವೆ ಸಂ .515/1992 ರಲ್ಲಿನ ಪ್ರತಿವಾದಿಗಳಾದ 1 ಹಾಗೂ 2 ರ ನಿರ್ದಿಷ್ಟವಾಗಿ ತಮ್ಮ ಹಕ್ಕನ್ನು ಸ್ಥಾಪಿಸಿ ರುಜುವಾತುಪಡಿಸದೆ, ಅವರು ಎಲ್ಲಾ ಲಭ್ಯ ಪರಿಹಾರಗಳನ್ನು ಪ್ರಯತ್ನಿಸಬೇಕಿತ್ತು.ಹನುಮಣ್ಣ ಪ್ರಾ.ಸಾ .1 ರ ಪತಿ ಹಾಗೂ ಪ್ರಾ.ಸಾ .2 ರ ತಂದೆಯಾಗಿದ್ದರೂ ಸಹ ಅವರಿಂದ ಆ ಹಕ್ಕನ್ನು ತಪ್ಪಿಸಲಾಗಿದೆ.ವ್ಯವಹರಣೆಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ವಿಷಯ ಹಾಗೂ ಪಕ್ಷಕಾರರು ಮುಖ್ಯವಾಗಿ ಒಂದೇ ಆಗಿದ್ದಾರೆ ಹಾಗೂ ಸದರಿ ವಿಷಯವನ್ನು ಸಕ್ಷಮ ನ್ಯಾಯಾಲಯದ ಮುಂದೆ ನ್ಯಾಯ ನಿರ್ಣಯ ಮಾಡಲಾಗಿತ್ತು.ಇಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ 11 ನೇ ಪ್ರಕರಣವನ್ನು ನಮೂದಿಸುವುದು ಅಗತ್ಯವಾಗಿದ್ದು, ಅದು ಈ ಮುಂದಿನಂತಿದೆ:

"11. ಪೂರ್ವ ನ್ಯಾಯ:-ಒಂದು ದಾವೆಯಲ್ಲಿ ಅಥವಾ ವಿವಾದಾ ಂ ಶದಲ್ಲಿ ನೇರವಾಗಿಯ ಸಾರಭತವಾಗಿಯ ವಿವಾದ್ಯವಾಗಿರುವ ವಿಷಯವು, ಅದೇ ಸ್ವಾಮ್ಯದ ಆಧಾರದ ಮೇಲೆ ವ್ಯಾಜ್ಯ ನಡೆಸುತ್ತಿರುವ ಅದೇ ಪಕ್ಷಕಾರರು, ಅಥವಾ ಯಾರ ಅಧೀನದಲ್ಲಿ ಅವರು ಇಲ್ಲವೇ ಅವರಲ್ಲಿ ಯಾರಾದರೂ ಕ್ಲೇಮು ಮಾಡುತ್ತಿರುವರೋ ಅವರು, ಪಕ್ಷಕಾರರಾಗಿದ್ದು ಅಂಥ ಅನಂತರದ ದಾವೆಯನ್ನು, ಅಥವಾ ಅಂಥ ವಿವಾದಾಂಶವನ್ನು ಯಾವ ದಾವೆಯಲ್ಲಿ ಅನ ಂ ತರ ಎತ್ತಲಾಗಿದೆಯೋ ಆ ದಾವೆಯನ್ನು, ಅಧಿವಿಚಾರಣೆ ಮಾಡಲು ಸಕ್ಷಮವಾಗಿರುವ ನ್ಯಾಯಾಲಯವೊಂದರಲ್ಲಿ ಮೊದಲಿನ ದಾವೆಯೊಂದರಲ್ಲಿ ನೇರವಾಗಿ ಸಾರಭೂತವಾಗಿಯೂ ವಿವಾದವಾಗಿದ್ದು ಮತ್ತು ಆ ನ್ಯಾಯಾಲಯದಿಂದ ಸುನಾವಣೆಯಾಗಿ ಅಂತಿಮವಾಗಿ ತೀರ್ಮಾನಿತವಾಗಿದ್ದರೆ, ಆ ದಾವೆಯನ್ನು ಅಥವಾ ವಿವಾದಾಂಶವನ್ನು ಯಾವ ನ್ಯಾಯಾಲಯವೂ ಅಧಿವಿಚಾರಣೆ ಮಾಡತಕ್ಕದ್ದಲ್ಲ."

ಹೀಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 11 ನೇ ಪ್ರಕರಣದ ಮೂಲಕ ಕಾನೂನಿನ ಮೇರೆಗೆ ಏನನ್ನು ಪ್ರತಿಷೇಧಿಸಲಾಗಿದೆಯೋ, ಅದನ್ನು ಕಾನೂನಿನ ಸದರಿ ಉಪಬಂಧವನ್ನು ಸಂಪೂರ್ಣವಾಗಿ ಉಲ್ಲಂಘಿಸಿ ಒಳದಾರಿ ಮೂಲಕ ಮಾಡಲಾಗುವುದಿಲ್ಲ.ಇದನ್ನು ವಾದಿಗಳು ಹಕ್ಕುಳ್ಳವರಾಗದಿದ್ದರೂ ಸಹ ಅವರು ಕರಾರುವಕ್ಕಾಗಿ ಅದನ್ನೇ ವಾದಿಸಿದ್ದಾರೆ.

32. ಈ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಮೂಲ ದಾವೆ ಸಂ. 515/1992 ರಲ್ಲಿನ ವ್ಯವಹರಣೆಗಳಲ್ಲಿ ಪಾಲುಗೊಳ್ಳದೇ, ಹನುಮಣ್ಣನೊಂದಿಗೆ ಇದ್ದ ಸಂಬಂಧದ ಆಧಾರದ ಮೇಲೆ ದಾವಾ ಅನುಸೂಚಿ ಸ್ವತ್ತಿನ ಮೇಲಿನ ಹಕ್ಕಿನ ಘೋಷಣೆ ಮಾಡುವಂತೆ ಕೋರಿದ್ದಾರೆ.ಮಾನ್ಯ ಮುನ್ಸಿಫ್ ಹಾಗೂ ಜೆ.ಎಂ.ಎಫ್.ಸಿ. ಕಡೂರು ಇವರ ಕಡತದ ಆಧಾರದ ಮೇಲೆ, ಮಾನ್ಯ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಕಡೂರು ಇವರು ಮೂಲ ದಾವೆ ಸಂ .125/2001 ನ್ನು ಡಿಗ್ರಿಗೊಳಿಸಿ ಗಂಭೀರವಾಗಿ ದೋಷವೆಸಗಿದ್ದಾರೆ.ಆದಾಗ್ಯೂ, ಮಾನ್ಯ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು, ಚಿಕ್ಕಮಗಳೂರು ಇವರು ಆರ್.ಎ.ಸಂ .38/2002 ರಲ್ಲಿ, ಸ್ಪಷ್ಟವಾಗಿ ಮತ್ತು ತರ್ಕಬದ್ಧವಾಗಿ ತೀರ್ಪು ಹಾಗೂ ಡಿಕ್ರಿಯನ್ನು ರದ್ದುಪಡಿಸಿದ್ದಾರೆ.

33. ಆರ್.ಎ.ಸಂ .38/2002 ರಲ್ಲಿ ಮಾನ್ಯ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು, ಚಿಕ್ಕಮಗಳೂರು ಇವರು ಹೊರಡಿಸಿದ ತೀರ್ಪು ಹಾಗೂ ಡಿಗ್ರಿಯಲ್ಲಿ ನಾನು ಯಾವುದೇ ಗೊಂದಲವನ್ನಾಗಲೀ, ಕಾನೂನು ಬಾಹಿರತೆಯನ್ನಾಗಲೀ ಅಥವಾ ಲೋಪವನ್ನಾಗಲೀ ಗುರುತಿಸಿರುವುದಿಲ್ಲ.ಮುಖ್ಯವಾದ ಕಾನೂನಿನ ಪ್ರಶ್ನೆಗಳಿಗೆ ತದನುಸಾರವಾಗಿ ಉತ್ತರಿಸಲಾಗಿದೆ.

34. ಪರಿಣಾಮವಾಗಿ, ಅಪೀಲು ವಿಫಲಗೊಂಡಿದ್ದು, ಅದನ್ನು ತದನುಸಾರವಾಗಿ ವಜಾಗೊಳಿಸಲಾಗಿದೆ.